**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

**Crl.Misc. No.:573/200**
**P.W.1**

| | | |
|---|---|---|
| ಸಾಕ್ಷಿದಾರರ ಹೆಸರು | : | ಚೈತ್ರ.ಪಿ |
| ಗಂಡನ ಹೆಸರು | : | ಕುಮಾರ್ .ಎನ್.ಸಿ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಗೃಹಿಣಿ |
| ಸ್ಥಳ | : | ಬೈರನಪಾಳ್ಯ |

**ಸಾಕ್ಷಿಗೆ ಈ ದಿನ ದಿಃ 01.07.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಎಸ್ ವಿ ವಿ ವಕೀಲರಿಂದ

2 ನೇ ಅರ್ಜಿದಾರ ನನ್ನ ಮಗ. ಎನ್.ಸಿ ಕುಮಾರ್ ನನ್ನ ಗಂಡ. ಕನಕಪುರ ಟೌನ್ ಮಸ್ತಮ್ಮ ಕಲ್ಯಾಣ ಮಂಟಪದಲ್ಲಿ 28-11-2013 ರಂದು ಮದುವೆಯಾಯಿತು. ವಿವಾಹದ ನಂತರ ನಾನು ನನ್ನ ಗಂಡನ ಮನೆಗೆ ಹೋದೆನು. ನನ್ನ ಗಂಡನ ಮನೆ ಮುಗ್ಗೂರಿನಲ್ಲಿದೆ, ನಾನು ಅಲ್ಲಿ 1 ತಿಂಗಳು ವಾಸವಿದ್ದೆ. ನಂತರ ಬೆಂಗಳೂರಿನ ಬೈಲಪಾಳ್ಯದಲ್ಲಿರುವ ನಾಗಣ್ಣನವರ ಮನೆಗೆ ಬಾಡಿಗೆ ಮನೆಗೆ ವಾಸಕ್ಕೆ ಹೋದೆವು. ವಿವಾಹದ ಸಮಯದಲ್ಲಿ ನನ್ನ ಗಂಡನಿಗೆ 15 ಗ್ರಾಂ ಕುತ್ತಿಗೆ ಚೈನು, 5 ಗ್ರಾಂ ಉಂಗುರ ಮತ್ತು 1 ಲಕ್ಷ ನಗದು ಹಣ ನೀಡಿದ್ದಾರೆ. ಮಾತುಕತೆಯ ಮೇರೆಗೆ ಅವುಗಳನ್ನು ನೀಡಲಾಗಿತ್ತು. ವಿವಾಹ ಸಂದರ್ಭದಲ್ಲಿ ನನಗೆ ಬಂಗಾರದ 30 ಗ್ರಾಂ ಮಾಂಗಲ್ಯ ಸರ, 15 ಗ್ರಾಂ ನೆಕ್ಲಸ್, 6 ಗ್ರಾಂ ಕಿವಿಓಲೆ ನೀಡಲಾಗಿತ್ತು. ಬೈಲಪಾಳ್ಯದಲ್ಲಿ 1 ವರ್ಷ ಇದ್ದೆವು. ಆನಂತರ ನಾನು ನನ್ನ ತವರು ಮನೆಗೆ ಬಾಣಂತನಕ್ಕೆ ಹೋದೆನು. 1 ವರ್ಷ ಎಲ್ಲಾ ಸರಿಯಾಗಿತ್ತು. ಆನಂತರ ನನ್ನ ಗಂಡ ನನ್ನನ್ನು ನೋಡಿಕೊಳ್ಳಲಿಲ್ಲ. ನನ್ನನ್ನು ಕರೆದುಕೊಂಡು ಹೋಗಲಿಲ್ಲ. ನನ್ನನ್ನು ಮತ್ತು ನನ್ನ ಮಗುವನ್ನು ನೋಡಲು ನನ್ನ ಗಂಡ ಬರಲಿಲ್ಲ. ಪಂಚಾಯತಿ ಮಾಡಿ ನನ್ನನ್ನು ಮತ್ತು ನನ್ನ ಮಗುವನ್ನು ಗಂಡನೊಟ್ಟಿಗೆ ಕಳುಹಿಸಿದರು. ಆನಂತರ 2008 ರವರೆಗೆ ಅವರೊಟ್ಟಿಗೆ ಇದ್ದೆ.

ನನ್ನ ಗಂಡನಿಗೆ ಕುಡಿಯುವ ಹಾಗೂ ಇಸ್ಪೀಟ್ ಆಡುವ ಚಟವಿದೆ. ಅವರು ನನ್ನನ್ನು ಕುಡಿದು ಬಂದು ಹೊಡೆಯುವುದು, ಬಡಿಯುವುದು ಮಾಡುತ್ತಿದ್ದರು. ಮನೆಯ ಖರ್ಚಿಗೆ ಹಣ ನೀಡುತ್ತಿರಲಿಲ್ಲ. ತಂದೆಯಿಂದ 50 ಸಾವಿರ ಹಣ ಪಡೆದು ನನ್ನ ಗಂಡನಿಗೆ ನೀಡಿದ್ದೇನು. ಆದರೂ ಸಹ ಅವರು ನನ್ನನ್ನು ಮತ್ತು ನನ್ನ ಮಗುವನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ. ನಂತರ ನನ್ನ ಗಂಡ ಹೊಡೆದು ನನ್ನನ್ನು ಮತ್ತು ನನ್ನ ಮಗುವನ್ನು ಹೊರಹಾಕಿದರು. ನಾನು ನನ್ನ ತವರು ಮನೆಗೆ ಬಂದು, ಕೋಡಿಹಳ್ಳಿ ಮತ್ತು ತಲಘಟ್ಟಪುರದ ಪೋಲೀಸ್ ಠಾಣೆಗಳಲ್ಲಿ ದೂರು ಸಹ ಸಲ್ಲಿಸಿದ್ದೆ. ಆಗ ನನ್ನನ್ನು ಮತ್ತು ನನ್ನ ಮಗುವನ್ನು ಕರೆದುಕೊಂಡು ಹೋಗುವ ಯಾವುದೇ ಪಂಚಾಯತಿ ಆಗಲಿಲ್ಲ. ಮಗುವಿಗೆ 2 ಬಾರಿ ಹರಿಣಿ ಅಪರೇಷನ್ ಆಗಿತ್ತು. ಚಿಕಿತ್ಸಾ ವೆಚ್ಚವನ್ನು ನನ್ನ ತಂದೆಯಿಂದ ಕೈಸಾಲ ಮಾಡಿ ನಾನೇ ಭರಿಸಿದ್ದೇನೆ. ನನ್ನ ಗಂಡ ಜೇಮ್ಸ್ ಕ್ಲಬ್ ನಲ್ಲಿ ಕೆಲಸ ಮಾಡುತ್ತಾನೆ. ಆತನಿಗೆ ತಿಂಗಳಿಗೆ 40 ಸಾವಿರ ಸಂಬಳ ಬರುತ್ತದೆ. ವಾರ್ಷಿಕವಾಗಿ ಆತನ ಮನೆಯಿಂದ 3 ಲಕ್ಷದವರೆಗೆ ಆದಾಯ ಬರುತ್ತದೆ. ಅವರಿಗೆ ವ್ಯವಸಾಯದಿಂದ ಬರುವ ಆದಾಯ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. ನನ್ನನ್ನು ಹಾಗೂ ಮಗುವನ್ನು ಇಬ್ಬರನ್ನು ನೋಡಿಕೊಳ್ಳುವಷ್ಟು ಸಾಮರ್ಥ್ಯ ನನಗೆ ಇಲ್ಲ.

ನನ್ನ ಮದುವೆಗೆ ಸಂಬಂಧಿಸಿದಂತೆ ವಿವಾಹ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದು, ನನ್ನ ಮದುವೆ ಸಮಯದಲ್ಲಿ ತೆಗೆದ 2 ಛಾಯಾಚಿತ್ರಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಅರ್ಜಿದಾರರ ಪರ ವಕೀಲರು ಸಮಯ ಕೋರಿದ್ದು ನ್ಯಾಯದ ಹಿತದೃಷ್ಟಿಯಿಂದ ನೀಡಲಾಯಿತು)

**ಮೊದಲನೇ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ**
**ಕನಕಪುರ**